ಕುಮಟಾ ಕ್ಷೇತ್ರದ ಅಘನಾಶಿನಿ ನದಿಗುಂಟ ಏತ ನೀರಾವರಿ.

362(2343) ಡಾ: ಎಂ.ಪಿ. ಕರ್ಕಿ (ಕುಮಟಾ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಕುಮಟಾ ಕ್ಷೇತ್ರದಲ್ಲಿ ಅಘನಾಶಿನಿ ನದಿಗುಂಟ ಏತ ನೀರಾವರಿ ಕೈಗೊಳ್ಳಲು ಅವಕಾಶವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ಹಾಗಿದ್ದಲ್ಲಿ, ಇದಕ್ಕಾಗಿ ಯಾವ ಯಾವ ಸ್ಥಳವನ್ನು ಗುರುತಿಸಲಾಗಿದೆ; ಹಾಗೂ ಎಂದು ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಬಂದಿರುತ್ತದೆ. ಸದರಿ ಯೋಜನೆಗಳಿಗಾಗಿ ಈ ಕೆಳಕಾಣಿಸಿದ ಸ್ಥಳಗಳನ್ನು ಗುರುತಿಸಲಾಗಿದೆ. ಹಾಗೂ 1999-2000 ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಪ್ರಸ್ತಾಪಿಸಲಾಗಿದೆ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ	ಷರಾ
1.	ಕುಮಟಾ ತಾ: ಅಘನಾಶಿನಿ ನದಿಗುಂಟ ದೇವಳ್ಳಿ ಹತ್ತಿರ ಏತ ನೀರಾವರಿ ಯೋಜನೆ	-	-	ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು 84 ಹೆಕ್ಟೇರ್ಸ್ ಕ್ಷೇತ್ರಕ್ಕೆ ನೀರನ್ನು ಒದಗಿಸಲಾಗಿದೆ
2.	ಕುಮಟಾ ತಾ: ಶರಗುಂಬಿ ಬಳಿ ಏತ ನೀರಾವರಿ ಯೋಜನೆ	50.00	0.01	
3.	-ಸದರ- ಮುರೂರ ಕಲ್ಲಪ್ಪ ಬೋಗರಿ ಬೈಲ ಗ್ರಾಮದ ಬಳಿ ಏತ ನೀರಾವರಿ ಯೋಜನೆ	75.00	0.01	

4.	ಏತ ನೀರಾವರಿ ಯೋಜನೆ ಯೋಜನೆ ಕವಲಡಿ ಬಳಿ	60.00	0.01
5.	-ಸದರ- ಕಂದಳಿ ಬಳಿ -ಸದರ-	60.00	0.01
6.	-ಸದರ- ಮಳವಳ್ಳಿ ಶಿರಗೂರ ಬಳಿ -ಸದರ-	30.00	0.01

ಪ್ರಸ್ತಾಪಿತ ಯೋಜನೆಗಳಿಗೆ 1999-2000 ನೇ ಸಾಲಿನಲ್ಲಿ ಅನುದಾನವಿದ್ದ ಪ್ರಯುಕ್ತ ಮುಂಬರುವ ಸಾಲಿನಲ್ಲಿ ಸಾಕಷ್ಟು ಅನುದಾನ ಒದಗಿಸಿಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸಲಾಗುವುದು.

ಡಾ: ಎಂ.ಪಿ. ಕರ್ಕಿ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಲ್ಲಿ ಆರು ಯೋಜನೆಗಳನ್ನು ಗುರುತಿಸಿದ್ದೇವೆಂದು ಹೇಳಿದ್ದಾರೆ. ಕುಮುಟಾ ತಾಲ್ಲೂಕಿನ ಅಘನಾಶಿನಿ ನದಿಗುಂಟಿದೇವಳ್ಳಿ ಹತ್ತಿರ ಏತ ನೀರಾವರಿ ಯೋಜನೆ ಮುಗಿದು ಹತ್ತು ವರ್ಷ ಆಯಿತು. ಅದರಲ್ಲಿ ಪಂಪ್ ಅಳವಡಿಸುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿತ್ತು, ಅದನ್ನು ಅಳವಡಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನುಳಿದಿರುವಂತಹ ಐದು ಯೋಜನೆಗಳಿಗೆ ಸುಮಾರು 275 ಲಕ್ಷ ರೂಪಾಯಿಗಳು ಬೇಕು. ಆದರೆ ತಾವು ಬಜೆಟ್‌ನಲ್ಲಿ ಇಟ್ಟಿರುವುದು ಕೇವಲ 50 ಸಾವಿರ ರೂಪಾಯಿಗಳು ಮಾತ್ರ. ಈ ಐದು ಯೋಜನೆಗಳಲ್ಲಿ ಯಾವುದಾದರೊಂದು ಯೋಜನೆಯನ್ನು ಈ ವರ್ಷ ಕೈಗೊಳ್ಳುತ್ತೀರಾ? ಎರಡನೆಯದು, ಈ ಯೋಜನೆಯನ್ನು ಕೈಗೊಳ್ಳಬೇಕಾದರೆ ಅಲ್ಲಿನ ನೀರಿನ ಲಭ್ಯತೆ ನೋಡಬೇಕಾಗುತ್ತದೆ. ಇಲ್ಲದಿದ್ದರೆ ಈ ಎಲ್ಲಾ ಯೋಜನೆಗಳು ಫೈಲಾಗುತ್ತವೆ. ಬೇಸಿಗೆಯಲ್ಲಿ ನೀರಿನ ಲಭ್ಯತೆ ಎಷ್ಟು ಇದೆ ಎನ್ನುವ ಬಗ್ಗೆ ಅಂದಾಜು ಮಾಡಿದ್ದೀರಾ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಉಳಿದ ಐದು ಕಾಮಗಾರಿಗಳು ಏನು ಇವೆ, ಅವುಗಳಿಗೆ ನಾವು ಇನ್ನೂ ಎಸ್ಟಿಮೇಟ್ ಮಾಡಿಲ್ಲ. ನೀರು ಎಷ್ಟು ಲಭ್ಯತೆ ಇದೆ ಎನ್ನುವ ಮಾಹಿತಿ ಸಹ ನಮಗೆ ಇನ್ನೂ ದೊರೆತಿಲ್ಲ. ನೀರಿನ ಲಭ್ಯತೆ ಮತ್ತು ಎಸ್ಟಿಮೇಟ್ ಮಾಡಲು ನಾನು ಆರ್ಡರ್ ಮಾಡುತ್ತೇನೆ. ಸದಾಕಾಲ ಎಷ್ಟು ನೀರಿನ ಲಭ್ಯತೆ ಇರುತ್ತದೆ. ಎನ್ನುವ ಮಾಹಿತಿ ಸಂಗ್ರಹಿಸಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಡಾ: ಎಂ.ಪಿ. ಕರ್ಕಿ :— ಮಾನ್ಯ ಅಧ್ಯಕ್ಷರೇ, ಯಾವುದಾದರೊಂದು ಯೋಜನೆಯನ್ನು ಈ ವರ್ಷ ಪ್ರಾರಂಭ ಮಾಡುತ್ತೀರಾ ಎಂದು ಕೇಳಿದೆ, ಅದಕ್ಕೆ ಅವರು ಉತ್ತರ ಹೇಳಲಿಲ್ಲ. ಒಂದು ಯೋಜನೆಗೆ 10 ಸಾವಿರ ರೂಪಾಯಿಗಳಷ್ಟು ಇಟ್ಟಿದ್ದೀರಿ. 5 ಯೋಜನೆಗಳಲ್ಲಿ ಒಂದು ಯೋಜನೆಯನ್ನು ಈ ವರ್ಷ ಪ್ರಾರಂಭಿಸುತ್ತೀರಾ?

ಶ್ರೀ ತಿಪ್ಪೇಸ್ವಾಮಿ :— ಮಾನ್ಯ ಅಧ್ಯಕ್ಷರೇ, ನಾವು ಈ ಯೋಜನೆಗಳಿಗಾಗಿ ಹಣವನ್ನು ಮಾನ್ಯ ಆರ್ಥಿಕ ಸಚಿವರಲ್ಲಿ ಕೇಳಿದ್ದೇನೆ. ನನಗೆ ಆರ್ಥಿಕ ಇಲಾಖೆಯಿಂದ ಹಣ ಬಂದರೆ ನೀವು ಯಾವುದು ಪ್ರಾಮುಖ್ಯವೆಂದು ಹೇಳುತ್ತೀರೋ ಆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇನೆ. ಈ ವರ್ಷದಲ್ಲಿ ಸ್ವಲ್ಪ ಕಷ್ಟವಾಗುತ್ತದೆ.

ಡಾ: ಎಂ.ಪಿ. ಕರ್ಕಿ :— ಅನೇಕ ಕಾಮಗಾರಿಗಳು ತಾವು ನೋಡುತ್ತಿರುವ ಹಾಗೆ ಲಿಟಿಗೇಷನ್ ನಿಂದಾಗಿ, ಅಥವಾ ಇನ್ಯಾವುದೇ ಕಾರಣದಿಂದಾಗಿ ನಿಂತಿರುತ್ತವೆ. ಈಗ ತಾವು ಏನು ಬಜೆಟ್‌ನಲ್ಲಿ ತೋರಿಸಿರುತ್ತೀರಿ ಕಾಮಗಾರಿಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಆ ಕಾಮಗಾರಿಗಳಿಗೆ ಇಟ್ಟ ಹಣವನ್ನು ಈ ರೀತಿಯ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಬಹುದಲ್ಲವೇ?

ಅಧ್ಯಕ್ಷರು :— ನೀವೇ ಹೋಗಿ ಸ್ಪೆಸಿಫಿಕ್ ಆಗಿ ಅಂಥಾದ್ದು ಯಾವುದಾದರೂ ಇದ್ದರೆ ಹೇಳಿ ಅದನ್ನು ಮಾಡಿಕೊಡುತ್ತಾರೆ.

ತುಂಗಾಭದ್ರಾ ನದಿಗೆ ಕಟ್ಟಲಾಗುವ ಸಿಂಗಟಲೂರು ಬ್ಯಾರೇಜ್.

364(2398) ಶ್ರೀ ಡಿ.ಆರ್. ಪಾಟೀಲ್ (ಗದಗ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ತುಂಗಭದ್ರಾ ನದಿಗೆ ಕಟ್ಟಲಾಗುವ ಸಿಂಗಟಲೂರು ಬ್ಯಾರೇಜದಿಂದ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು ಯಾವ ಯಾವ ಜಿಲ್ಲೆಗೆ ಇದರಿಂದ ಪ್ರಯೋಜನವಾಗಲಿದೆ

ಆ) ಅದರ ಅಂದಾಜು ವೆಚ್ಚ ಎಷ್ಟು ಆ ಬಗ್ಗೆ ಈವರೆಗೆ ಎಷ್ಟು ವೆಚ್ಚಮಾಡಲಾಗಿದೆ

ಇ) ಪ್ರಸಕ್ತ ಹಣಕಾಸು ವರ್ಷದಲ್ಲಿ ಆ ಬ್ಯಾರೇಜ ನಿರ್ಮಾಣಕ್ಕೆ ಎಷ್ಟು ಹಣ ನಿಗದಿಗೊಳಿಸಲಾಗಿದೆ

ಈ) ಸದರಿ ಬ್ಯಾರೇಜ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲು ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

ಅ) ಸುಮಾರು 48,000 ಎಕರೆಗಳು.

ಇದರಿಂದ ಗದಗ್, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಿಗೆ ಪ್ರಯೋಜನವಾಗಲಿದೆ.